ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 01-02-1971.

*<u>**ಕಿರೀಟ, ತಿಲಕ ಮತ್ತು ಸಿಂಹಾಸನಾಧಿಕಾರಿಯಾಗುವ ವಿಧಿ**</u>.*

(ताज, तिलक और तख्त नशीन बनने की विधि)

ಬಾಪ್ ದಾದಾ ಎಲ್ಲಾ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಾರೆ ಏಕೆಂದರೆ ಪ್ರತಿಯೊಬ್ಬರ ನಂಬರ್ ವಾರ್ ಕಿರೀಟ ಮತ್ತು ಸಿಂಹಾಸನವನ್ನು ನೋಡುತ್ತಿದ್ದಾರೆ. ತಾವು ತಮ್ಮನ್ನು ಕಿರೀಟ ಮತ್ತು ಸಿಂಹಾಸನದ ಮೇಲೆ ಕುಳಿತಿರುವವರು ಎಂದು ನೋಡಿಕೊಳ್ಳುತ್ತೀರಾ? ಎಷ್ಟು ಪ್ರಕಾರದ ಕಿರೀಟ ಮತ್ತು ಎಷ್ಟು ಪ್ರಕಾರದ ಸಿಂಹಾಸನಗಳಿವೆ? ತಮಗೆ ಎಷ್ಟು ಕಿರೀಟಗಳಿವೆ? (21 ಜನ್ಮಗಳ 21 ಕಿರೀಟ). ಈಗ ಯಾವುದಾದರೂ ಕಿರೀಟ ವಿದೆಯೋ ಅಥವಾ ಕೇವಲ 21 ಕಿರೀಟಗಳು ಕಾಣುತ್ತಿವೆಯೋ? ಈಗಿನ ಕಿರೀಟವೇ ಅನೇಕ ಜನ್ಮಗಳಿಗೆ ಕಿರೀಟವನ್ನು ಧಾರಣೆ ಮಾಡಿಸುತ್ತದೆ. ಹಾಗಾದರೆ ಈಗ ತಮ್ಮನ್ನು ಕಿರೀಟಧಾರಿಗಳು ಎಂದು ನೋಡುತ್ತೀರಾ? ಎಷ್ಟು ಕಿರೀಟವನ್ನು ಧಾರಣೆ ಮಾಡಿದ್ದೀರಿ (ಅಸಂಖ್ಯ) ಪಾಂಡವ ಸೇನೆಗೆ ಎಷ್ಟು ಕಿರೀಟಗಳಿವೆ? (ಎರಡು). ಶಕ್ತಿಯರಿಗೆ ಅನೇಕ ಮತ್ತು ಪಾಂಡವರಿಗೆ ಎರಡು? ಈಗ ಕಿರೀಟ ಧಾರಣೆ ಮಾಡದಿದ್ದರೆ ಭವಿಷ್ಯದ ಕಿರೀಟಗಳು ಹೇಗೆ ಸಿಗುವವು? ಈ ಸಮಯ ಎಲ್ಲಾ ಮಕ್ಕಳಿಗೆ ಕಿರೀಟ ಮತ್ತು ಸಿಂಹಾಸನಾಧಿಕಾರಿಯನ್ನಾಗಿ ಮಾಡುತ್ತಾರೆ. ಸಿಂಹಾಸನದ ಮೇಲೆ ಕುಳಿತರೆ ಕಿರೀಟಧಾರಿಗಳು ಸಹ ಆಗುವಿರಿ.

ಈಗ ಹೃದಯ ಸಿಂಹಾಸನ ಮತ್ತು ಅಕಾಲಸಿಂಹಾಸನಾಧಿಕಾರಿ ಆಗಿದ್ದೀರಿ ಮತ್ತು ಪವಿತ್ರತೆಯ ಲೈಟ್ ಕಿರೀಟವನ್ನು ಈಗಲೇ ಧಾರಣೆ ಮಾಡುತ್ತಿರಿ. ಮತ್ತು ತಂದೆಯ ಹೃದಯ ಸಿಂಹಾಸನದ ಮೇಲೆ ಕುಳಿತುಕೊಳ್ಳುವ ಕಾರಣ ಸೇವಾಧಾರಿಯಾಗುವುದರಿಂದ ಜವಾಬ್ದಾರಿಯ ಕಿರೀಟವನ್ನು ಧಾರಣೆ ಮಾಡುತ್ತೀರಿ. ಈಗ ಎರಡು ಸಿಂಹಾಸನ ಮತ್ತು ಎರಡು ಕಿರೀಟಗಳನ್ನು ಎಷ್ಟು ಸಮಯ ಧರಿಸಿರುತ್ತೀರಿ ಎಂದು ಪ್ರತಿಯೊಬ್ಬರು ತಮ್ಮನ್ನು ನೋಡಿಕೊಳ್ಳಿ. ಎಲ್ಲರಿಗೂ ಕಿರೀಟ ಮತ್ತು ಸಿಂಹಾಸನಗಳು ಸಿಕ್ಕಿವೆ ಆದರೆ ಯಾರು ಎಷ್ಟು ಸಮಯ ಸಿಂಹಾಸದನ ಮೇಲೆ ಕುಳಿತುಕೊಳ್ಳುತ್ತಾರೆ ಮತ್ತು ಕಿರೀಟವನ್ನು ಧರಿಸುತ್ತಾರೆ ಅದು ಅವರ ವ್ಯಕ್ತಿಗತ ಪುರುಷಾರ್ಥವಾಗಿದೆ. ಕೆಲವರಿಗೆ ಸ್ಥೂಲ ಕಿರೀಟವನ್ನು ಧರಿಸಿರುವ ಅನುಭವ ಕಡಿಮೆ ಇರುತ್ತದೆ. ಆದ್ದರಿಂದ ಮತ್ತೆ ಮತ್ತೆ ಅದನ್ನು ತೆಗೆದು ಬಿಡುತ್ತಾರೆ ಆದರೆ ಈ ಕಿರೀಟ ಮತ್ತು ಸಿಂಹಾಸನ ಎಷ್ಟು ಸರಳ ಸಹಜವಾಗಿದೆ ಎಂದರೆ ಎಲ್ಲಾ ಸಮಯದಲ್ಲಿಯೂ ಇದನ್ನು ಧರಿಸಿರಬಹುದು. ಸಿಂಹಾಸನದ ಮೇಲೆ ಕುಳಿತುಕೊಂಡಾಗ ಕಾರ್ಯಕರ್ತರು ಅವರ ಆದೇಶವನ್ನು ಕೇಳುತ್ತಾರೆ. ಆಸನವನ್ನು ಬಿಟ್ಟರೆ ಅದೇ ಕಾರ್ಯಕರ್ತರು ಅವರ ಆದೇಶಾನುಸಾರ ನಡೆಯುವುದಿಲ್ಲ. ಅದೇ ರೀತಿ ತಾವು ಕಿರೀಟ ಮತ್ತು ಸಿಂಹಾಸನವನ್ನು ಬಿಟ್ಟಾಗ ಈ ಕರ್ಮೇಂದ್ರಿಯಗಳು ತಮ್ಮ ಆದೇಶವನ್ನು ಕೇಳುವುದಿಲ್ಲ. ಆಸನದ ಮೇಲೆ ಕುಳಿತಾಗ ಇದೇ ಕರ್ಮೇಂದ್ರಿಯಗಳು ಜೀ ಹುಜೂರ ಎನ್ನುತ್ತವೆ. ಆದ್ದರಿಂದ ಈ ಕಿರೀಟ ಮತ್ತು ಸಿಂಹಾಸನವನ್ನು ಎಂದೂ ಬಿಡಬೇಡಿ. ತಮ್ಮ ಕಿರೀಟ ಮತ್ತು ಸಿಂಹಾಸನದಮೇಲೆ ಕುಳಿತ ಸಂಪೂರ್ಣ ಚಿತ್ರವನ್ನು ಸದಾ ನೆನೆಪಿಟ್ಟುಕೊಳ್ಳಿ. ಅದನ್ನು ನೆನೆಪಿಟ್ಟುಕೊಳ್ಳುವುದರಿಂದ ಮಾಡಲ್ಪಡುವ ಅನ್ಯ ಅನೇಕ ಚಿತ್ರಗಳು ಆಗುವುದಿಲ್ಲ. ಒಂದು ದಿನದೊಳಗೆ ಪ್ರತಿಯೊಬ್ಬರ ಭಿನ್ನ ಭಿನ್ನ ರೂಪ ಬದಲಾಯಿಸುವ ಚಿತ್ರಗಳು ಕಂಡುಬರುವವು. ಆದ್ದರಿಂದ ತಮ್ಮ ಒಂದು ಸಂಪೂರ್ಣ ಚಿತ್ರ ಸಮ್ಮುಖದಲ್ಲಿ ಇಟ್ಟುಕೊಳ್ಳಿ. ಕಿರೀಟ ಮತ್ತು ಸಿಂಹಾಸನಾಧಿಕಾರಿ ಆಗುವುದರಿಂದ ಗುರಿ ಮತ್ತು ನಶೆ ಸ್ವತಃ ಇರುವುದು ಏಕೆಂದರೆ ಕಿರೀಟ ಮತ್ತು ಸಿಂಹಾಸನಗಳು ನಡೆಯವು ಮತ್ತು ಗುರಿ ನೆನಪು ಕೊಡುವಂತಹುದು. ಆದ್ದರಿಂದ ತಮ್ಮ ಕಿರೀಟ ಮತ್ತು ಸಿಂಹಾಸನ ಎಂದಿಗೂ ಬಿಡಬಾರದು. ಎಷ್ಟೆಷ್ಟು ಈಗ ಕಿರೀಟ ಮತ್ತು ಸಿಂಹಾಸನ ಧಾರಣೆ ಮಾಡುವ ಅನುಭವಿ ಅಥವಾ ಅಭ್ಯಾಸಿಯಾಗುವಿರೋ, ಸತ್ಯಯುಗದಲ್ಲಿಯೂ ಅಷ್ಟೇ ಸಮಯ ಕಿರೀಟ ಮತ್ತು ಸಿಂಹಾಸನ ಧಾರಣೆ ಮಾಡುವಿರಿ. ಈಗ ಸ್ವಲ್ಪ ಸಮಯವಿದ್ದರೆ, ಅಲ್ಲಿಯೂ ಬಹಳ ಸ್ವಲ್ಪ ಸಮಯ ಕಿರೀಟ ಮತ್ತು ಸಿಂಹಾಸನ ಪ್ರಾಪ್ತಿಯಾಗುವವು. ಈಗಿನ ಅಭ್ಯಾಸ ಪ್ರತಿಯೊಬ್ಬರಿಗೂ

ತಮ್ಮ ಭವಿಷ್ಯದ ಸಾಕ್ಷಾತ್ಕಾರ ಮಾಡಿಸುತ್ತಿದೆ. ಈಗಲೂ ಕೇವಲ ಬೇರೆಯವರನ್ನು ಕಿರೀಟ ಮತ್ತು ಸಿಂಹಾಸನದೊಂದಿಗೆ ನೋಡಿ ಖುಷಿ ಪಡುತ್ತಿದ್ದರೆ ಅಲ್ಲಿಯೂ ನೋಡುತ್ತಲೇ ಇರುವಿರಿ. ಆದ್ದರಿಂದ ಸದಾಕಾಲಕ್ಕಾಗಿ ಕಿರೀಟಧಾರಿ ಮತ್ತು ಸಿಂಹಾಸನಾಸೀನರಾಗಿ, ಇಂತಹ ಸಿಂಹಾಸನ ಮತ್ತು ಕಿರೀಟ ಮತ್ತೆ ಎಂದಾದರೂ ಸಿಗುವುದೇ? ಈಗಲೇ ಸಿಗುವುದು. ಕಲ್ಪದ ನಂತರವೂ ಈಗಲೇ ಸಿಗುವುದು. ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ.

ಮನೆಯಲ್ಲಿ ಕುಳಿತಲ್ಲಿಯೇ ಯಾರಾದರೂ ಕಿರೀಟ ಮತ್ತು ಸಿಂಹಾಸನ ಕೊಡಲು ಬಂದರೆ ಏನು ಮಾಡುವಿರಿ? ತಂದೆಯೂ ಈಗ ಆತ್ಮರ ಮನೆಯಲ್ಲಿ ಅತಿಥಿಯಾಗಿದ್ದಾರಲ್ಲವೇ? ಮನೆಯಲ್ಲಿ ಕುಳಿತಲ್ಲಿಯೇ ಕಿರೀಟ ಮತ್ತು ಸಿಂಹಾಸನವನ್ನು ಉಡುಗೊರೆಯಾಗಿ ಕೊಡಲು ಬಂದಿದ್ದಾರೆ. ಇವುಗಳನ್ನು ಬಿಟ್ಟು ಎಲ್ಲಿ ಹೋಗುತ್ತಿರಿ ಗೊತ್ತೇ? ಮಾಯೆಯ ನಿವಾಸ ಸ್ಥಾನ ಇದೆಯಾ? ತಾವೂ ಸಹ ಸರ್ವವ್ಯಾಪಿಯೆಂದು ಹೇಳುತ್ತೀರೋ ಅಥವಾ ತಮ್ಮನ್ನು ಬಿಟ್ಟು ಬೇರೆ ಎಲ್ಲಾ ಜಾಗಗಳಿವೆಯೋ? ತಾವು 63 ಜನ್ಮಗಳಲ್ಲಿ ಎಷ್ಟು ಬಾರಿ ಮಾಯೆಗೆ ನೆಲೆಯನ್ನು ಕೊಟ್ಟಿರಬೇಕು. ಅದರ ಪರಿಣಾಮವೂ ಎಷ್ಟು ಬಾರಿ ನೋಡಿರಬೇಕು. ಅನೇಕ ಬಾರಿ ಅನುಭವವುಳ್ಳವರು ಮತ್ತೆ ಅದೇ ಮಾತು ಹೇಳಿದರೆ ಏನು ಹೇಳಬೇಕು? ಕಿರೀಟ. ಮತ್ತು ಸಿಂಹಾಸನವನ್ನು ಬಿಟ್ಟು ಕಾಡಿಗೆ ಹೋದರು ಎಂದು ತೋರಿಸುತ್ತಾರಲ್ಲವೇ ಅದೇ ರೀತಿ ಇಲ್ಲಿಯೂ ಮುಳ್ಳಿನ ಕಾಡಿಗೆ ಹೋಗುತ್ತೀರಿ. ಎಲ್ಲಿಯ ಸಿಂಹಾಸನ, ಎಲ್ಲಿಯ ಮುಳ್ಳಿನ ಕಾಡು, ಯಾವುದನ್ನು ಬಯಸುತ್ತೀರಿ?

ಭಕ್ತರು ಅಥವಾ ಶೃಂಗಾರ ಮಾಡುವವರು ಸ್ನಾನಾದಿಗಳನ್ನು ಮಾಡಿ ಮಸ್ತಕದಲ್ಲಿ ತಿಲಕವನ್ನು ಅವಶ್ಯವಾಗಿ ಹಚ್ಚಿಕೊಳ್ಳುತ್ತಾರೆ. ಶೃಂಗಾರದ ಕಾರಣ, ಭಕ್ತಿಯ ಕಾರಣ ಮತ್ತು ಸುಮಂಗಲಿಯ ಕಾರಣ ತಿಲಕವನ್ನು ಹಚ್ಚಿಕೊಳ್ಳುತ್ತಾರೆ. ಅದೇ ರೀತಿ ಅಮೃತವೇಳೆ ತಮ್ಮ ಜ್ಞಾನ ಸ್ನಾನವಾದ ಮೇಲೆ ಜ್ಞಾನದಿಂದ ಶೃಂಗರಿಸಿಕೊಳ್ಳುತ್ತೀರಿ. ಅದೇ ರೀತಿ ಅಮೃತವೇಳೆ ಸ್ಮೃತಿಯ ತಿಲಕವನ್ನು ಹಚ್ಚಿಕೊಳ್ಳಬೇಕು. ಆದರೆ ಅಮೃತ ವೇಳೆ ಈ ಸ್ಮೃತಿಯ ತಿಲಕವನ್ನು ಹಚ್ಚಿಕೊಳ್ಳುವುದನ್ನು ಮರೆತು ಬಿಡುತ್ತೀರಿ ಯಾರಾದರೂ ಹಚ್ಚಿದರೆ ಅದನ್ನು ಅಳಿಸಿಕೊಳ್ಳುತ್ತೀರಿ. ಬಾರಿ-ಬಾರಿ ಮಸ್ತಕದ ಮೇಲೆ ಕೈ ಇಟ್ಟುಕೊಂಡು ತಿಲಕವನ್ನು ಅಳಿಸಿಕೊಳ್ಳುವ ಅಭ್ಯಾಸ ಕೆಲವರಿಗೆ ಇರುತ್ತದೆ. ಈಗ ಹಚ್ಚಿ ಕೊಳ್ಳುತ್ತಾರೆ ಮತ್ತೆ ಅಳಿಸಿಕೊಳ್ಳುತ್ತಾರೆ. ಅದೇ ರೀತಿ ಈ ಮಾತೂ ಇದೆ. ಕೆಲವರಿಗೆ ತಿಲಕ ಹಚ್ಚಿಕೊಳ್ಳುವುದು ಮರೆತು ಹೋಗುತ್ತದೆ. ಕೆಲವರು ಹಚ್ಚಿಕೊಳ್ಳುತ್ತಾರೆ. ಮತ್ತೆ ಅಳಿಸಿಕೊಳ್ಳುತ್ತಾರೆ. ಹಚ್ಚಿಕೊಳ್ಳುವುದು ಮತ್ತು ಅಳಿಸಿಕೊಳ್ಳುವುದು ಎರಡೂ ಕೆಲಸಗಳು ನಡೆಯುತ್ತಿರುತ್ತವೆ. ಆದ್ದರಿಂದ ಅಮೃತ ವೇಳೆ ಹಚ್ಚಿದ ಈ ಸ್ಮೃತಿಯ ತಿಲಕವನ್ನು ಸದಾ ಕಾಯಂ ಇಟ್ಟುಕೊಳ್ಳಿ ಆಗ ಅಲಂಕರಣೆ, ಶೃಂಗಾರ ಮತ್ತು ಯೋಗಿಯ ಲಕ್ಷಣಗಳು ಸದಾ ತಮ್ಮ ಮಸ್ತಕದಿಂದ ಕಂಡು ಬರುವವು.

ಭಕ್ತರ ತಿಲಕವನ್ನು ನೋಡಿ ಇವರು ಭಕ್ತರು ಎಂದು ತಿಳಿಯುತ್ತದೆ, ಅದೇ ಪ್ರಕಾರ ತಮ್ಮ ಸ್ಪಷ್ಟ ಸ್ಮೃತಿಯ ತಿಲಕ ಕಂಡು 'ಯೋಗಿ ಆತ್ಮ' ಎಂದು ತಕ್ಷಣ ಅನುಭವ ಮಾಡುವರು. ಆದ್ದರಿಂದ ತಿಲಕ, ಸಿಂಹಾಸನ ಮತ್ತು ಕಿರೀಟಗಳು ಕಾಯಂ ಇರಲಿ. ತಿಲಕವನ್ನು ಅಳಿಸಿಕೊಳ್ಳಬೇಡಿ. ತಮ್ಮನ್ನು ಮಾಸ್ಟರ್ ಸರ್ವಶಕ್ತಿವಂತ ಎಂದು ಹೇಳಿಕೊಳ್ಳುವಾಗ ಕಿರೀಟ ಮತ್ತು ಸಿಂಹಾಸನಗಳನ್ನು ಧಾರಣೆ ಮಾಡಿಕೊಳ್ಳಲು ಬರುವುದಿಲ್ಲವೇ? ಸದಾ ಕರ್ಮವನ್ನು ಮಾಡುತ್ತಾ ಎರಡು ಮಾತುಗಳನ್ನು ನೆನಪಿಡಿ. ಆಮೇಲೆ ಯಾರದೇ ಮನದಲ್ಲಿ ಉತ್ಪನ್ನವಾಗುವ ಸಂಕಲ್ಪಗಳನ್ನು ಬಾಯಿಯಿಂದ ಕೇಳುವ ಮಾತುಗಳನ್ನು ಸಹಜವಾಗಿ ಗ್ರಹಿಸುವಂತೆ ಗ್ರಹಿಸುವ ಅಭ್ಯಾಸವಾಗುವುದು. ಆದರೆ ಸಮಾನತೆಗೆ ಸಮೀಪ ಬಂದಾಗ ಸಾಧ್ಯವಾಗುವುದು. ಪರಸ್ಪರರ ಸ್ವಭಾವದಲ್ಲಿಯೂ ಕೆಲವರ ಸಮಾನತೆಯಿದ್ದರೆ ಅವರ ಭಾವಗಳನ್ನು ಸಹಜ ತಿಳಿದುಕೊಳ್ಳುತ್ತಾರೆ. ತಂದೆಯ ಸಮಾನತೆಯ ಸಮೀಪಕ್ಕೆ ಹೋಗುವುದರಿಂದ ಮನದ ಸಂಕಲ್ಪಗಳನ್ನು, ವಾಣಿಯನ್ನು ತಿಳಿದುಕೊಳ್ಳುವಂತೆ ಸಮೀಪ ಗ್ರಹಿಸುವಿರಿ. ಇದೂ ಸಹ ತಂದೆಯ ಸಮಾನತೆಯ ಸಮೀಪ ಹೋಗುವುದರಿಂದ ವಾಣಿಯಂತೆ ಮನದ ಸಂಕಲ್ಪಗಳನ್ನೂ ಗ್ರಹಿಸಬಹುದು. ಇದಕ್ಕೆ ಕೇವಲ ತಮ್ಮ ಸಂಕಲ್ಪಗಳ ಮಿಶ್ರಣವಾಗಬಾರದು. ಸಂಕಲ್ಪಗಳ ಮೇಲೆ ನಿಯಂತ್ರಣ ಶಕ್ತಿಯಿರಬೇಕು. ಹೊರಗಡೆಯ ವ್ಯವಹಾರವನ್ನು ನಿಯಂತ್ರಣ ಮಾಡುವ

ನಿಯಂತ್ರಣ ಶಕ್ತಿ ಹೇಗೆ ಒಬ್ಬೊಬ್ಬರಲ್ಲಿ ಒಂದೊಂದು ತರಹ ಇರುತ್ತದೆಯೋ ಹಾಗೆಯೇ ಈ ಮನದ ಸಂಕಲ್ಪಗಳ ವ್ಯವಹಾರವನ್ನು ನಿಯಂತ್ರಣ ಮಾಡುವ ನಿಯಂತ್ರಣಾ ಶಕ್ತಿ ನಂಬರ್ ವಾರ್ ಇರುತ್ತದೆ.

ನಾನು ಪ್ರತಿ ಸಮಯ, ಪ್ರತಿ ಕ್ಷಣ, ಪ್ರತಿ ಕರ್ಮವನ್ನು ಮಾಡುತ್ತಾ ಸ್ಟೇಜ್ ಮೇಲೆ ಇದ್ದೇನೆ ಎಂಬ ಮಾತನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿ. ಹೀಗೆ ಪ್ರತಿಯೊಂದು ಕರ್ಮದ ಮೇಲೆ ಗಮನವಿರುವುದರಿಂದ ಸಂಪೂರ್ಣ ಸ್ಟೇಜ್ ನ ಸಮೀಪಕ್ಕೆ ಬರುವಿರಿ. ಇನ್ನೊಂದು ಮಾತು-ಸದಾ ತಮ್ಮ ವರ್ತಮಾನ ಮತ್ತು ಭವಿಷ್ಯದ ಸ್ಥಾನಮಾನವನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ. ಒಂದು ಸ್ಟೇಜ್, ಎರಡನೆಯದು ಸ್ಥಾನಮಾನ ಈ ಎರಡೂ ಮಾತುಗಳನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳುವುದರಿಂದ ಸ್ಥಾನಮಾನಕ್ಕೆ ಧಕ್ಕೆಯಾಗುವಂತಹ ಯಾವ ಕಾರ್ಯವೂ ಆಗುವುದಿಲ್ಲ. ಮತ್ತು ತಮ್ಮನ್ನು ಸ್ಟೇಜ್ ಮೇಲೆ ಇರುವೆವು ಎಂದು ತಿಳಿಯುವುದರಿಂದ ಸದಾ ಶ್ರೇಷ್ಠ ಕರ್ತವ್ಯಗಳನ್ನು ಮಾಡುವ ಪ್ರೇರಣೆ ಸಿಗುವುದು. ಈ ಎರಡು ಮಾತುಗಳನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳಿ, ಒಳ್ಳೆಯದು.

ತಾವು ದೂರದಿಂದ ಬಂದಿರುವಿರೋ ಅಥವಾ ಬಾಪ್ ದಾದಾ ಬಂದಿರುವರೋ? ಗತಿ ತೀವ್ರವಾಗಿದೆ ಆದರೆ ದೂರ ಯಾರದು? ತಾವು ಪ್ರಯಾಣ ಮಾಡಿ ಬಂದಿರುವಿರಿ. ಬಾಪ್ ದಾದಾ ಸಹ ಮಕ್ಕಳೊಂದಿಗೆ ಮಿಲನ ಮಾಡಲು ಪ್ರಯಾಣ ಮಾಡಿ ಬಂದಿರುವರು. ಆದ್ದರಿಂದ ಇಬ್ಬರೂ ಪ್ರಯಾಣಿಕರು. ತಮ್ಮ ಪ್ರಯಾಣದಲ್ಲಿ ದಣಿವಿದೆ ಮತ್ತು ತಂದೆಯ ಪ್ರಯಾಣದಲ್ಲಿ ದಣಿವು ಇಲ್ಲ. ಮಧುಬನ ನಿವಾಸಿಯಾಗುವುದು ಡ್ರಾಮಾದಲ್ಲಿ ಬಹಳ ಸೌಭಾಗ್ಯದ ಲಕ್ಷಣವಾಗಿದೆ. ಏಕೆಂದರೆ ಮಧುಬನವಾಗಿದೆ ವರದಾನಿ ಭೂಮಿ, ಅದು ಪರಿಶ್ರಮದ ಭೂಮಿ, ಅದು ವರದಾನಿ ಭೂಮಿ, ಆದ್ದರಿಂದ ವರದಾನಿ ಭೂಮಿಗೆ ಬಂದು ವರದಾತನಿಂದ ಅಥವಾ ನಿಮಿತ್ತರಾದ ಆತ್ಮರಿಂದ ವರದಾನವನ್ನು ಪಡೆಯಬಹುದು. ನಿಮಿತ್ತರಾದ ಶ್ರೇಷ್ಠ ಆತ್ಮರಿಂದ ಹೇಗೆ ವರದಾನ ಪಡೆಯುವಿರಿ. ಈ ಲೆಕ್ಕವನ್ನು ತಿಳಿದಿದ್ದೀರಾ? ಮಧುಬನದಲ್ಲಿ ವರದಾನ ಅರ್ಥಾಥ್ ವಾಯುಮಂಡಲದಲ್ಲಿ, ಪವಿತ್ರ ಚರಿತ್ರೆಯ ಭೂಮಿಯಲ್ಲಿ ವರದಾನ ತುಂಬಿವೆ. ಆ ನಿಮಿತ್ತರಾದ ಶ್ರೇಷ್ಠ ಆತ್ಮರಿಂದ ವರದಾನವನ್ನು ಹೇಗೆ ಪಡೆಯುವಿರಿ? ವರದಾನ ಪಡೆದಾಗ ಪರಿಶ್ರಮ ಕಡಿಮೆ ಇರುತ್ತದೆ. ಮಂದಿರದಲ್ಲಿ ಹೇಗೆ ಮಾರ್ಗದರ್ಶಕರು ವರದಾನ ಕೊಡಿಸಲು ದೇವಿಯರ ಮುಂದೆ ಕರೆದುಕೊಂಡು ಹೋಗುತ್ತಾರೆ. ಹಾಗೆಯೇ ತಾವೂ ಮಾರ್ಗದರ್ಶಿಯಾಗಿದ್ದೀರಿ. ಯಾತ್ರಿಕರಿಗೆ ಹೇಗೆ ವರದಾನ ಕೊಡಿಸುವಿರಿ? ವರ ಪಡೆಯುವ ಸಾಧನವೇನು? ಶ್ರೇಷ್ಠ ಆತ್ಮರಿಂದ ವರದಾನ ಸಿಗುತ್ತದೆ ಏಕೆ ನಿಮಿತ್ತರಾಗಿರುವ ಕಾರಣ ಅವರ ಪ್ರತಿಯೊಂದು ಕರ್ಮವನ್ನು ನೋಡಿ ಸಹಜ ಪ್ರೇರಣೆ ಸಿಗುತ್ತದೆ. ಸಾಕಾರದಲ್ಲಿ ಯಾವುದೇ ವಸ್ತುವನ್ನು ನೋಡಿದಾಗ ಬೇಗನೆ ಗ್ರಹಣವಾಗುತ್ತದೆ. ಬುದ್ಧಿಯಿಂದ ಯೋಚಿಸುವ ಮಾತು ತಡವಾಗಿ ಗ್ರಹಿಸಲಾಗುತ್ತದೆ. ಇಲ್ಲಿಯೂ ಸಾಕಾರ ರೂಪದಲ್ಲಿ ಯಾರು ಸಾಕಾರನನ್ನು ನೋಡಿರುವರೋ, ಅವರನ್ನು ನೋಡುವುದು ಸಹಜವಾಗಿದೆ ಮತ್ತು ಬಿಂದಿ ರೂಪವನ್ನು ನೆನಪು ಮಾಡುವುದು ಅದೇ ರೀತಿ ನಿಮಿತ್ತರಾದ ಶ್ರೇಷ್ಠ ಆತ್ಮರ ಸೇವೆ, ತ್ಯಾಗ, ಸ್ನೇಹ, ಸರ್ವರ ಸಹಯೋಗದ ಪ್ರಾಕ್ಟಿಕಲ್ ಕರ್ಮವನ್ನು ನೋಡುತ್ತಾ ಸಿಗುವ ಪ್ರೇರಣೆ ವರದಾನದ ರೂಪದಲ್ಲಿ ಸಹಜ ಪ್ರಾಪ್ತಿಯಾಗುತ್ತದೆ. ವರದಾತನ ಭೂಮಿಯಾದ ಮಧುಬನಕ್ಕೆ ಬಂದು ಶ್ರೇಷ್ಠ ಆತ್ಮರಿಂದ ಸಹಜ ಕರ್ಮಯೋಗಿಯಾಗುವ ವರದಾನ ಪ್ರಾಪ್ತಿ ಮಾಡಿಕೊಂಡು ಹೋಗಬೇಕು ಏಕೆಂದರೆ ಕರ್ಮ ಮಾಡುತ್ತಾ ಸ್ಮೃತಿಯಲ್ಲಿರುವುದು ಕಷ್ಟವೆಂದು ಹೇಳುತ್ತೀರಿ. ಆದ್ದರಿಂದ ನಿಮಿತ್ತರಾದ ಆತ್ಮರು ಕರ್ಮ ಮಾಡುತ್ತಾ ಈ ಗುಣಗಳ ಧಾರಣೆಯಲ್ಲಿರುವುದನ್ನು ನೋಡಿ ಸಹಜ ಕರ್ಮಯೋಗಿಯಾಗುವ ಪ್ರೇರಣೆ ಸಿಗುತ್ತದೆ. ಆದ್ದರಿಂದ ಒಂದೂ ವರದಾನವನ್ನು ಬಿಟ್ಟು ಹೋಗಬಾರದು ಸರ್ವ ವರದಾನ ಪ್ರಾಪ್ತಿ ಮಾಡುತ್ತಾ ಸ್ವಯಂ ಮಾಸ್ಟರ್ ವರದಾತರಾಗಿ ಸರ್ವರಿಗೆ ವರದಾನವನ್ನು ಕೊಡಬಲ್ಲಿರಿ ಒಳ್ಳೆಯದು ಆತ್ಮಿಕ ತಂದೆಗೆ ಆತ್ಮಿಕ ಮಕ್ಕಳ ಪ್ರಿಯ ಸ್ಮೃತಿ ಮತ್ತು ನಮಸ್ತೆ ನಮಸ್ತೆ.

ಅವ್ಯಕ್ತ ಮುರಳಿ 01-02-1971.

***ಕಿರೀಟ, ತಿಲಕ ಮತ್ತು ಸಿಂಹಾಸನಾಧಿಕಾರಿಯಾಗುವ ವಿಧಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಂಗಮ ಯುಗದ ಜವಾಬ್ದಾರಿಯ ಕಿರೀಟವನ್ನು ಸದಾ ಧರಿಸಿ, ಭವಿಷ್ಯದ ಕಿರೀಟವನ್ನು ಸದಾಕಾಲಕ್ಕಾಗಿ ಪಡೆದಿದ್ದೇನೆ.

2. ನಾನು ಸಂಗಮ ಯುಗದಲ್ಲಿ ಹೃದಯ ಸಿಂಹಾಸನ ಅಧಿಕಾರಿ, ಸ್ವರಾಜ್ಯಾಧಿಕಾರಿ ಮತ್ತು ಭವಿಷ್ಯದಲ್ಲಿ ರಾಜ್ಯ ಸಿಂಹಾಸನಾಧಿಕಾರಿ ಆಗಿದ್ದೇನೆ.

3. ನಾನು ಅಮೃತ ವೇಳೆಯಿಂದ ಸ್ಮೃತಿಯ ತಿಲಕವನ್ನು ಸದಾ ಇಟ್ಟುಕೊಂಡಿರುವ ಅಲಂಕರಣೆ, ಶೃಂಗಾರಿ ಮತ್ತು ಯೋಗಿಯ ಲಕ್ಷಣ ಧಾರಿ.

4. ನಾನು ನನ್ನ ಸ್ಮೃತಿಯ ತಿಲಕದಿಂದ "ಯೋಗಿ ಆತ್ಮ" ಎಂಬ ಅನುಭವವನ್ನು ಎಲ್ಲರಿಗೂ ಮಾಡಿಸಿದ್ದೇನೆ.

5. ನಾನು ಯಾರದೇ ಸಂಕಲ್ಪಗಳನ್ನು ಮಾತಿನ ಹಾಗೆ ಸುಲಭವಾಗಿ ಗ್ರಹಿಸಬಲ್ಲ ಬಾಪ್ ಸಮಾನ ಸ್ವರೂಪ.

6. ನಾನು ಸದಾ ಶ್ರೇಷ್ಠ ಕರ್ತವ್ಯವನ್ನೇ ಮಾಡುತ್ತಿದ್ದೇನೆ.

7. ನಾನು ಸರ್ವ ವರದಾನಗಳನ್ನು ಸಹಜವಾಗಿ ಪಡೆದಿರುವ ಮಧುಬನ ನಿವಾಸಿಯಾಗಿದ್ದೇನೆ.